**ದಿನಾಂಕಃ 03.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ಮತ್ತು 3 ನೇ ಆರೋಪಿಗಳ ಪರ ವಕೀಲರಿಂದಃ–**

11. ನನ್ನ ಸ್ವಂತ ಊರು ಮೈಸೂರು, ಅಂದರೆ ಕೆಸರೆ, ಕುರಿಮಂಡಿ. ನಮ್ಮ ತಂದೆ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಅವರ ಜೊತೆ ನಾನು ಕೆಲಸ ಮಾಡಿಕೊಂಡು, ಕೆಲಸ ಕಲಿತು, ಕಂಟ್ರಾಕ್ಟರ್ ಆದೆ. ನ್ಯಾಯಾಲಯದ ಮುಂದಿರುವ ಮೂವರು ಆರೋಪಿತರು ನನ್ನಲ್ಲಿ ಕೆಲಸ ಮಾಡುತ್ತಿರಲಿಲ್ಲ. ನಮ್ಮ ಮನೆಯಿಂದ 200 ಮೀ ದೂರ ಇರುವ ಸಿ–ಬ್ಲಾಕಿನಲ್ಲಿ ಆರೋಪಿತರು ವಾಸವಿರುತ್ತಾರೆ. ಆರೋಪಿತರನ್ನು ದಿನಾಲೂ ನೋಡುತ್ತಿದ್ದೆ. 1 ನೇ ಆರೋಪಿ ವಿನಯನ ತಂದೆಗೆ ಕೈಗಾಡಿ ಹೋಟೆಲ್ ಇತ್ತು. ಅವರೊಂದಿಗೆ ಕೆಲಸ ಮಾಡುತ್ತಿದ್ದ. ಆತನ ತಂದೆಯ ಹೆಸರು ಬಾಬು ಎಂದು. ಕೆಸರೆಯಲ್ಲಿ ಅವರ ಮನೆ ಇತ್ತು. ಮೂಲತಃ ಅವರು ಎಲ್ಲಿಯವರು ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆಯ ಪಕ್ಕದಲ್ಲೇ ಅವರ ಕೈಗಾಡಿಯನ್ನು ಇಟ್ಟಿದ್ದರು. ಆತನ ತಂದೆಯನ್ನು ಮಾತನಾಡಿಸಿದ್ದೇನೆ. 1 ನೇ ಆರೋಪಿ ಮತ್ತು ಆತನ ತಂದೆ ಒಟ್ಟಿಗೆ ವಾಸ ಮಾಡುತ್ತಿದ್ದರು. ಎಷ್ಟು ದಿನ ಅವರು ಆ ಹೋಟೆಲನ್ನು ನಡೆಸಿದರು ಮತ್ತು ಈ 1 ನೇ ಆರೋಪಿ ಯಾವಾಗ ಆಂಬುಲೆನ್ಸಿನಲ್ಲಿ ಕೆಲಸಕ್ಕೆ ಸೇರಿಕೊಂಡ ಎನ್ನುವುದು ನನಗೆ ಗೊತ್ತಿಲ್ಲ. ಆತನ ತಂದೆ ಎಲ್ಲಿ ಹೋದರು ಎನ್ನುವುದು ನನಗೆ ಗೊತ್ತಿಲ್ಲ.

12. 3 ನೇ ಆರೋಪಿ ಅಪ್ಪು ಕೂಲಿ ಕೆಲಸ ಮಾಡುತ್ತಿದ್ದ. ಆತನ ತಂದೆ ಗೊತ್ತು. 2 ನೇ ಆರೋಪಿ ಎಪಿಎಂಸಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ. 3 ಜನರು ಅವರವರ ಕೆಲಸದಲ್ಲಿ ನಿರತರಾಗಿದ್ದರು

ಎನ್ನುವುದು ಸರಿ. ಅವರು ದಿನಾಲೂ ಬೆಳಿಗ್ಗೆ ಎಷ್ಟು ಹೊತ್ತಿಗೆ ಹೋಗುತ್ತಿದ್ದರು ನಂತರ, ಎಷ್ಟು ಹೊತ್ತಿಗೆ ಬರುತ್ತಿದ್ದರು, ಅವರ ದಿನಚರಿಯ ಬಗ್ಗೆ ನನಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ.

13. ನಾನು ನನ್ನ ಕಂಟ್ರಾಕ್ಟರ್ ಕೆಲಸವನ್ನು ಮೈಸೂರಿನ ಎಲ್ಲಾ ಕಡೆ ಮಾಡುತ್ತೇನೆ. ನಾನು ಸಬ್–ಕಂಟ್ರಾಕ್ಟರ್. ನನ್ನ ಹೆಸರಿನಲ್ಲಿಯೇ ಗುತ್ತಿಗೆ ಕೆಲಸ ಮಾಡುತ್ತೇನೆ. ಯಾವುದೇ ಕಂಪನಿಯ ಅಡಿಯಲ್ಲಿ ಮಾಡುವುದಿಲ್ಲ. ಸರ್ಕಾರದ ಅಡಿಯಲ್ಲಿ ಯಾವುದೇ ಗುತ್ತಿಗೆಯನ್ನು ಪಡೆದಿರುವುದಿಲ್ಲ. ನನ್ನ ಬಳಿ ಸುಮಾರು 15 ಜನ ಕೆಲಸಗಾರರು ಕೆಲಸ ಮಾಡುತ್ತಾರೆ. ನಾನು ಯಾವುದೇ ಹಾಜರಾತಿ ವಹಿಯನ್ನು ಇಟ್ಟಿರುವುದಿಲ್ಲ.

14. ಮೃತ ರವಿ ನನ್ನ ಬಳಿಯಲ್ಲಿ 8 ತಿಂಗಳಿನಿಂದ ಕೆಲಸಕ್ಕೆ ಬರುತ್ತಿದ್ದ. ಆತ ಕೂಡ ಕುರಿಮಂಡಿಯಲ್ಲಿ ಒಂದು ಬಾಡಿಗೆ ಮನೆಯಲ್ಲಿದ್ದ. ಅದು ಮೊದಲನೇ ಅಂತಸ್ತಿನಲ್ಲಿತ್ತು. 8 ತಿಂಗಳಿಗೂ ಮುಂಚೆ ಆತ ಬೇರೆಯವರ ಬಳಿ ಕೆಲಸ ಮಾಡುತ್ತಿದ್ದ. ಆತನ ತಂದೆ ತಾಯಿ ಯಾರೆಂದು ಗೊತ್ತಿರಲಿಲ್ಲ. ಆತ ಚಾಮರಾಜನಗರ ಜಿಲ್ಲೆಯ ಗಾಣದಪುರದಿಂದ ಬಂದಿದ್ದ. ಕೆಲಸ ಇದ್ದಾಗ ನಾನೇ ಫೋನ್ ಮಾಡಿ ಕರೆಯಿಸಿಕೊಳ್ಳುತ್ತಿದ್ದೆ. ಆತ ಎಲ್ಲರೊಂದಿಗೂ ಚೆನ್ನಾಗಿರುತ್ತಿದ್ದ, ಚೆನ್ನಾಗಿದ್ದ. ಆತ ಒಬ್ಬನೇ ಬಾಡಿಗೆಗೆ ಮನೆ ಪಡೆದಿದ್ದ, ಆದರೆ ಸ್ನೇಹಿತರೆಲ್ಲರೂ ಅಲ್ಲಿ ಹೋಗಿ ಇರುತ್ತಿದ್ದರು. ಆತನಿಗೆ ಎಷ್ಟು ಜನ ಸ್ನೇಹಿತರಿದ್ದರು ಎಂದು ನಾನು ಲೆಕ್ಕ ಹಾಕಿಲ್ಲ. ಸೂರ್ಯ ಕುಮಾರ್ ನನಗೆ ಗೊತ್ತು. ಆತ ಯಾವುದೋ ಆಯಿಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಸೂರ್ಯ ಕುಮಾರ್ ಮತ್ತು ಮೃತ ರವಿ ಸಂಬಂಧಿಕರಾಗಿರಲಿಲ್ಲ. ಅವರಿಬ್ಬರೂ ಒಂದೇ ಊರಿನವರು ಸಹ ಆಗಿರಲಿಲ್ಲ. ಆತ ಸೂರ್ಯ ಕುಮಾರ್ ರವರ ಮನೆಯಲ್ಲೇ ಊಟ ತಿಂಡಿ ಮಾಡುತ್ತಿದ್ದ. ಈ ಬಗ್ಗೆ ನನ್ನಲ್ಲಿ ಹೇಳುತ್ತಿದ್ದ. ಊಟ ಮಾಡಿದ ನಂತರ ರವಿ ಆತನ ಮನೆಗೆ ಹೋಗುತ್ತಿದ್ದ. ಸೂರ್ಯ ಕುಮಾರ್ ತನ್ನ ಮನೆಯಲ್ಲೇ ಇರುತ್ತಿದ್ದ. ಮೃತ ರವಿ ವಾಸ ಮಾಡುತ್ತಿದ್ದ ಮನೆಗೆ ನಾನು ಎಂದು ಹೋಗಿರಲಿಲ್ಲ. ಮೃತ ರವಿ ತನ್ನ ಮನೆಗೆ ಹೋದ ನಂತರ ಆತನ ಮನೆಗೆ ಯಾರು ಯಾರು ಬಂದು ಹೋಗುತ್ತಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ.

15. ದಿಃ15.12.2020 ರಂದು ಬೆಳಿಗ್ಗೆ 10.16 ಕ್ಕೆ ನಾನು ನನ್ನ ಮನೆಯಲ್ಲಿದ್ದೆ. ನನ್ನ ಮನೆಯಿಂದ ಮೃತ ರವಿಯ ಮನೆಗೆ 200 ಮೀಟರ್ ದೂರವಿತ್ತು. ದಿಃ15.12.2020 ರಂದು ಬೆಳಿಗ್ಗೆ 7.00 ರಿಂದ 8.00 ಗಂಟೆಯ ಒಳಗೆ ಆತನಿಗೆ ನಾನು ಫೋನ್ ಮಾಡಿರಬಹುದು. ಆತನ ಮೊಬೈಲ್ ನಂಬರ್ ನನ್ನ ಮೊಬೈಲಿನಲ್ಲಿದೆ. ಆದರೆ ನಂಬರ್ ನೆನಪಿಲ್ಲ. ನಾನು ಫೋನ್ ಮಾಡಿದಾಗ ಮೃತ ರವಿಯ

ಮೊಬೈಲ್ ಫೋನ್ ರಿಂಗಾಗಿತ್ತು. ಅದನ್ನು ಯಾರು ರಿಸೀವ್ ಮಾಡಿರಲಿಲ್ಲ. ನಾನು ಎಷ್ಟು ಬಾರಿ ಆತನಿಗೆ ಆಗ ಫೋನ್ ಮಾಡಿದ್ದೆ ಎನ್ನುವುದು ನನಗೆ ಈಗ ನೆನಪಿಲ್ಲ. ಆತ ಫೋನ್ ತೆಗೆಯದೇ ಇದುದ್ದರಿಂದ, ನಾನು ಆತನ ಮನೆಗೇನೂ ಹೋಗಲಿಲ್ಲ. ಆತ ಊರಿಗೆ ಹೋಗುವಾಗ ನನಗೆ ತಿಳಿಸಿ ಹೋಗುತ್ತಿರಲಿಲ್ಲ. ನನ್ನ ಬಳಿಯಲ್ಲಿ ಕೆಲಸ ಇಲ್ಲದಿದ್ದಾಗ, ನಾನು ಕರೆಯದಿದ್ದಾಗ ಆತ ಬೇರೆಯವರ ಬಳಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ. 14 ನೇ ತಾರೀಖಿನ ಸಂಜೆವರೆಗೂ ಅಂದರೆ 7.00 ಗಂಟೆಯವರೆಗೂ ಆತ ನನ್ನ ಜೊತೆಯಲ್ಲೇ ಇದ್ದ. ಅಂದರೆ ನನ್ನ ಜೊತೆ ಕೆಲಸಕ್ಕೆ ಬಂದಿದ್ದ. ಆತನಿಗೆ ನಾನು ಕೂಲಿ ಕೊಟ್ಟಿದ್ದೆ. ಆತನ ಹವ್ಯಾಸಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಆತನ ಬಳಿಯಲ್ಲಿ ಯಾವುದೇ ದ್ವಿಚಕ್ರ ವಾಹನವಿರಲಿಲ್ಲ.

16. ದಾಸ್ ಎನ್ನುವವರು ಮೃತ ರವಿಯ ಮನೆಯ ಕೆಳಗಡೆ ವಾಸವಿದ್ದರು. ಆತ ಮೊದಲು ನನ್ನ ಬಳಿಯಲ್ಲೇ ಕೆಲಸ ಮಾಡುತ್ತಿದ್ದರು. ದಾಸ್ ನನಗೆ ಬೆಳಿಗ್ಗೆ 10.16 ಗಂಟೆಗೆ ಫೋನ್ ಮಾಡಿದ್ದರು. ರವಿ ತೀರಿ ಹೋಗಿದ್ದಾನೆ ಎಂದು ತಿಳಿಸಿದರು. ಆಗ ಇನ್ನು ಪೊಲೀಸ್ ಬಂದಿರಲಿಲ್ಲ. ನಾನು ರವಿಯ ಮನೆಯ ಹತ್ತಿರಕ್ಕೆ ಹೋದೆ. ಬಾಗಿಲು ತೆಗೆದಿತ್ತು. ದಾಸ, ಹಿಂದಿನ ದಿನ ರಾತ್ರಿ ರವಿಯ ಮನೆಗೆ ಯಾರು ಯಾರು ಬಂದಿದ್ದರು ಎಂದು ಹೇಳಿದ. ನಾನು ರವಿಯ ಮನೆಯನ್ನು ನೋಡಿದಾಗ ಅಲ್ಲಿ ಮೃತ ರವಿಯ ಶವ ಮಾತ್ರ ಇತ್ತು. ಬೇರೆ ಯಾರು ಇರಲಿಲ್ಲ. ಅಲ್ಲಿ ಬಿಯರ್ ಬಾಟಲ್, ನೀರಿನ ಬಾಟಲ್, ಕೋಕಾ ಕೋಲಾ ಬಾಟಲ್, ಖಾಲಿ ಲೋಟಗಳು, ಸ್ಟೀಲ್ ಲೋಟ, 90 ಎಂ.ಎಲ್.ನ 3 ಟೆಟ್ರಾ ಪ್ಯಾಕೆಟ್ಗಳು, 180 ಎಂ.ಎಲ್.ನ 1 ಟೆಟ್ರಾ ಪ್ಯಾಕೆಟ್ ಇದ್ದವು. ಅವು ಯಾವ ಬ್ರಾಂಡ್ ಎಂದು ನನಗೆ ಗೊತ್ತಿಲ್ಲ. ಮೃತ ರವಿಗೆ ದಿನಾಲೂ ಕುಡಿಯುವ ಚಟವಿತ್ತು. ಆತ ಸಿಗರೇಟ್ ಸೇದುತ್ತಿದ್ದನೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಆತನ ಮನೆಯ ಹತ್ತಿರ ಹೋದಾಗ ಸುಮಾರು 150 ಜನ ಸೇರಿದ್ದರು. ಸೂರ್ಯಕುಮಾರ್ ಇರಲಿಲ್ಲ. ಸಾಯುವ ಪೂರ್ವದಲ್ಲಿ ಮೃತ ರವಿ ಸೂರ್ಯ ಕುಮಾರ್ ಬಗ್ಗೆ ನನಗೆ ಯಾವ ವಿಷಯವನ್ನು ತಿಳಿಸಿರಲಿಲ್ಲ. ದಾಸ್ ನನಗೆ, ದಿಃ14.12.2020 ರ ರಾತ್ರಿ 10.00 ರಿಂದ 10.30 ರ ಸಮಯದಲ್ಲಿ ಕುರಿಮಂಡಿಯ ಗೇಟ್ ಬಳಿ ಗಲಾಟೆಯಾಗಿತ್ತು ಎಂದು ತಿಳಿಸಿದ್ದ. ಈ ವಿಷಯವನ್ನು ದಾಸ್ ಗೂ ಸಹ ಬೇರೆಯವರು ತಿಳಿಸಿದ್ದರು. ಯಾವ ವಿಚಾರಕ್ಕಾಗಿ ಗಲಾಟೆಯಾಗಿತ್ತು ಮತ್ತು ಗಲಾಟೆಯ ಬಗ್ಗೆ ದೂರನ್ನು ನೀಡಲಾಗಿದೆಯೇ ಎನ್ನುವ ಬಗ್ಗೆ ನಾನು ಮಾಹಿತಿಯನ್ನೇನೂ ಪಡೆಯಲಿಲ್ಲ. ಕುರಿಮಂಡಿಯ ಗೇಟ್ ಬಳಿಯಲ್ಲಿ ರಾತ್ರಿ 10.00 ಗಂಟೆಯ ನಂತರ ಸಾಧಾರಣವಾಗಿ ಜನ ಓಡಾಡುತ್ತಾರೆ. ನಾನು ಮೃತ ರವಿಯ ತಂದೆ-ತಾಯಿಗೆ ಫೋನ್ ಮಾಡಿ ವಿಷಯ ತಿಳಿಸಿರಲಿಲ್ಲ, ಆದರೆ ನನ್ನ ಬಾವಮೈದುನ ಫೋನ್ ಮಾಡಿ ವಿಷಯ ತಿಳಿಸಿರುತ್ತಾರೆ. ನಾನು ಪೊಲೀಸರಿಗೆ ನೀಡಿದ

ಹೇಳಿಕೆಯಲ್ಲಿ ಮೃತ ರವಿಯ ಮನೆಯವರಿಗೆ ಫೋನ್ ಮಾಡಿದೆ ಆದರೆ ಕನೆಕ್ಟ್ ಆಗಲಿಲ್ಲ ಎಂದು ತಿಳಿಸಿರುವುದಿಲ್ಲ.

17. ನಾನು ಪೊಲೀಸ್ ಠಾಣೆಗೆ ಬೆಳಿಗ್ಗೆ 11.30 ಕ್ಕೆ ಹೋದೆ. ನಾನು, ನನ್ನ ಸ್ನೇಹಿತರು ಪೊ.ಠಾಣೆಗೆ ದೂರನ್ನು ಕೊಡಲು ಹೋಗಿದ್ದೆವು. ಬೆಳಿಗ್ಗೆ 11.30 ರ ಒಳಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ. ಮೊದಲು ನಾನು ಪೊ.ಠಾಣೆಯಲ್ಲಿ ಅಲ್ಲಿದ್ದ ರೈಟರನ್ನು ಭೇಟಿ ಮಾಡಿದೆ. ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ನ್ನು ನಾನೇ ಬರೆದಿರುತ್ತೇನೆ. ನಿಪಿ-1 ರಲ್ಲಿರುವ ಎಲ್ಲಾ ಮಾಹಿತಿಗಳು ನನಗೆ ಗೊತ್ತು. ಕುರಿಮಂಡಿಯ ಗೇಟ್ ಬಳಿಯಲ್ಲಿ ಗಲಾಟೆ ಮೃತ ರವಿ, 1 ನೇ ಆರೋಪಿ ವಿನಯ್ ಮತ್ತು 2 ನೇ ಆರೋಪಿ ನಿಖಿಲ್ ರವರ ನಡುವೆ ಗಲಾಟೆಯಾಗಿತ್ತು ಎನ್ನುವುದು ತಿಳಿದು ಬಂತು. ಯಾವ ವಿಚಾರಕ್ಕಾಗಿ ಗಲಾಟೆಯಾಗಿತ್ತು ಎನ್ನುವುದು ಗೊತ್ತಾಗಲಿಲ್ಲ. 1 ಮತ್ತು 2 ನೇ ಆರೋಪಿತರು ಮೃತ ರವಿಯ ಸ್ನೇಹಿತರಾಗಿದ್ದರು. ಅವರು ಯಾವಾಗಲೂ ಜೊತೆಯಲ್ಲಿದ್ದರು. ಅದನ್ನು ನಾನು ನೋಡುತ್ತಿದ್ದೆ. ನಾನು ನೀಡಿರುವ ದೂರಿನಲ್ಲಿ, "ಈತ ಸತ್ತು ಬಿದ್ದಿರುವುದನ್ನು ನೋಡಿದರೆ ಕೊಲೆಯಾಗಿರುವ ಬಗ್ಗೆ ಗೋಚರಿಸುತ್ತದೆ, ಈತನ ಸ್ನೇಹಿತರುಗಳಾದ, ನಿಖಿಲ್ ಅಲಿಯಾಸ್ ಮಾದ ಹಾಗೂ ವಿನಯ್ ಅಲಿಯಾಸ್ ಪರೋಟ ಇವರುಗಳು ಕುಡಿದು ಯಾವುದೋ ವಿಚಾರಕ್ಕೆ ಗಲಾಟೆ ಮಾಡಿಕೊಂಡು ರವಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುತ್ತಾರೆಂಬ ಅನುಮಾನ ಇರುತ್ತದೆ." ಎಂದಿದೆ ಎನ್ನುವುದು ಸರಿ. ಇದನ್ನು ನಾನು ಸ್ಥಳದಲ್ಲಿ ನೋಡಿ ಮತ್ತು ದಾಸ ಹೇಳಿದ್ದನ್ನು ಕೇಳಿ ಬರೆದಿರುತ್ತೇನೆ. ದಾಸ್ ಮತ್ತು ಮೃತ ರವಿಯ ಸಂಬಂಧ ಚೆನ್ನಾಗಿತ್ತು. ದಾಸ್ ಆತನ ಅತ್ತೆ ಮನೆಯಲ್ಲಿದ್ದ. ರವಿ ಬಾಡಿಗೆ ಮನೆಯಲ್ಲಿದ್ದ. ದಾಸ್ ಗೆ ಆರೋಪಿತರ ಪರಿಚಯವೂ ಇತ್ತು. ರವಿಯ ಮನೆಗೆ ರಾತ್ರಿಯ ಹೊತ್ತು ಯಾರಾದರೂ ಕುಡಿದು ಬರುತ್ತಿದ್ದರೋ, ಇಲ್ಲವೋ ಎನ್ನುವ ಬಗ್ಗೆ ನನಗೆ ದಾಸ್ ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ. ಕುಡಿದಾಗ ಸ್ವಲ್ಪ ಜೋರಾಗಿ ಮಾತನಾಡುವುದು ಸಾಮಾನ್ಯ ಎನ್ನುವುದು ಸರಿ. ದಾಸ್ ತನ್ನ ಅತ್ತೆಯ ಮನೆಯಲ್ಲಿ ಇದ್ದುದರಿಂದ, ಮೃತ ರವಿ ಮತ್ತು ಆತನ ಸ್ನೇಹಿತರು ಕುಡಿದು ಜೋರಾಗಿ ಮಾತನಾಡುವಾಗ, ದಾಸ್ ಅದನ್ನು ಪ್ರಶ್ನಿಸಿದಾಗ ಗಲಾಟೆಯಾಗಿದ್ದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಅಲ್ಲಿ ಒಟ್ಟು 100 ಕ್ವಾಟ್ರಸ್‌ಗಳಿವೆ. ಒಂದೊಂದು ಬ್ಲಾಕಿನಲ್ಲಿ 100 ಮನೆಗಳಿವೆ.

18. ಪೊಲೀಸರು ಮೃತ ರವಿಯ ರಕ್ತ ಸಂಬಂಧಿಕರ ಬಗ್ಗೆ ಕೇಳಿದರು, ನಾನು ನನಗೆ ಗೊತ್ತಿಲ್ಲ ಎಂದು ತಿಳಿಸಿದೆ. ಪೊಲೀಸರು ಮೃತ ರವಿಯ ತಮ್ಮನಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಆತ

ಬರುತ್ತೇವೆ ಎಂದು ಹೇಳಿದ, ಆದರೆ ಆ ದಿನ ಅವರು ಬರಲಿಲ್ಲ. ಆತನ ತಮ್ಮನ ಹೆಸರು ಏನೆಂದು ನನಗೆ ಗೊತ್ತಿಲ್ಲ. ನಾನು ರವಿಯ ತಮ್ಮನ ಬಳಿಯಲ್ಲಿ ಮಾತನಾಡಿರುವುದಿಲ್ಲ.

19. ನಾನು ಮರುದಿನ ಮಧ್ಯಾಹ್ನ 2.00 ಗಂಟೆಗೆ ಜೆ.ಎಸ್.ಎಸ್.ಆಸ್ಪತ್ರೆಗೆ ಹೋಗಿದ್ದೆ. ಆಗ ಪೊಲೀಸರು ಬಂದಿದ್ದರು ಹಾಗೂ ನಮ್ಮ ಏರಿಯಾದ ಎಲ್ಲಾ ಹುಡುಗರು ಬಂದಿದ್ದರು. ಮೃತ ರವಿಯ ತಂದೆ ತಾಯಿ ಪೊ.ಠಾಣೆಗೆ ಬಂದಿದ್ದರು. ನಂತರ ಅವರು ಪೊಲೀಸರೊಂದಿಗೆ ಆಸ್ಪತ್ರೆಗೆ ಬಂದರು. ನಾನು ಅವರನ್ನು ಮಾತನಾಡಿಸಿರುವುದಿಲ್ಲ. ಅವರು ರವಿಯ ಶವವನ್ನು ಪಡೆಯಲಿಲ್ಲ. ಈ ಬಗ್ಗೆ ತಿಳಿದು ಬಂದದ್ದು ಏನೆಂದರೆ ಆ ರವಿ ಮೊದಲು ಊರಿನಲ್ಲಿ ಗಲಾಟೆ ಮಾಡಿಕೊಂಡು ಊರು ಬಿಟ್ಟಿದ್ದನಂತೆ ಹೀಗಾಗಿ ಅವರು ಶವವನ್ನು ಊರಿಗೆ ತೆಗೆದುಕೊಂಡು ಹೋಗಲಿಲ್ಲ. ಹೀಗಾಗಿ ಆತನ ಊರಿನಲ್ಲಿ, ರವಿಗೆ ಆಗದವರು ಇದ್ದರು ಎಂದಾಯಿತು ಎಂದು ಮಾಡಿದ ಸಲಹೆಗೆ ಸಾಕ್ಷಿ, ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಪೊಲೀಸರು ಮೃತ ರವಿಯ ತಂದೆ ತಾಯಿಯ ಹೇಳಿಕೆ ಪಡೆದುಕೊಂಡಿಲ್ಲ.

20. ನಾನು ಪುನಃ ದಿಃ18.12.2020 ರಂದು ಠಾಣೆಗೆ ಹೋಗಿದ್ದೆ. ಮರುಹೇಳಿಕೆ ಕೊಡಲು ನಾನೇ ಹೋಗಿದ್ದೆ. ಏಕೆಂದರೆ ದಾಸ್ ರವರ ಮೊಬೈಲ್ ನಂಬರನ್ನು ನಾನು ತಪ್ಪಾಗಿ ಕೊಟ್ಟಿದ್ದೆ. ಹೀಗಾಗಿ ಸರಿಯಾದ ನಂಬರನ್ನು ತಿಳಿಸಲು ಹೋಗಿದ್ದೆ. ದಾಸ್ ನನ್ನ ಜೊತೆಯಲ್ಲಿ ಬಂದಿರಲಿಲ್ಲ. ಪೋಸ್ಟ್ ಮಾಟಮ್ ಆಗುವಾಗ ಸೂರ್ಯ ಕುಮಾರ್ ನನ್ನ ಜೊತೆಯಲ್ಲೇ ಇದ್ದರು. ಸೂರ್ಯಕುಮಾರ್, ಆರೋಪಿತರು ಮೃತ ರವಿಯೊಂದಿಗೆ ದಿಃ14.12.2020 ರ ರಾತ್ರಿ ಇದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ನಿಪಿ-2 ರಿಂದ 15 ರವರೆಗಿನ ಫೋಟೋಗಳನ್ನು ತೆಗೆಯುವಾಗ ನಾನು ಇದ್ದೆ. ಆ ಫೋಟೋಗಳನ್ನು ನಾನು ಪೊ.ಠಾಣೆಯಲ್ಲಿ ನೋಡಿರುವುದಿಲ್ಲ. ಮೊದಲ ಬಾರಿಗೆ ಈ ನ್ಯಾಯಾಲಯದಲ್ಲಿ ಸದರಿ ಫೋಟೋಗಳನ್ನು ನೋಡಿರುತ್ತೇನೆ.

**ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.